ದಿನಾಂಕಃ 08.08.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ. ಟಿ.ಎಂ. ವಕೀಲರಿಂದಃ

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿದೆ ಎಂದು ಪ್ರಮಾಣೀಕರಿಸುತ್ತೇನೆ.

ಈ ಕೆಳಕಂಡ ದಾಖಲೆಯನ್ನು ಹಾಜರುಪಡಿಸುತ್ತಿದ್ದೇನೆ.

| | |
|---|---|
| ನಿ.ಪಿ.1 | ಪ್ರಥಮ ವರ್ತಮಾನ ವರದಿಯ ದೃಡೀಕೃತ ನಕಲು |
| ನಿ.ಪಿ.2 | ದೂರಿನ ದೃಡೀಕೃತ ನಕಲು |
| ನಿ.ಪಿ.3 | ದೋಷಾರೋಪಣಾ ಪಟ್ಟಿಯ ದೃಡೀಕೃತ ನಕಲು |
| ನಿ.ಪಿ.4 | ಸ್ಥಳ ಮಹಜರ್ ನ ದೃಡೀಕೃತ ನಕಲು |
| ನಿ.ಪಿ.5 | ಕಚ್ಚಾ ನಕಾಶೆಯ ದೃಡೀಕೃತ ನಕಲು |
| ನಿ.ಪಿ.6 | ಐಎಂವಿ ವರದಿಯ ದೃಡೀಕೃತ ನಕಲು |
| ನಿ.ಪಿ.7 | ಗಾಯದ ಪ್ರಮಾಣ ಪತ್ರದ ದೃಡೀಕೃತ ನಕಲು |
| ನಿ.ಪಿ.8 & 9 | 2 ವಾಹನ ಅಮಾನತು ಪಂಚನಾಮೆಯ ದೃಡೀಕೃತ ನಕಲು |
| ನಿ.ಪಿ.10& 11 | 2 ಪಿ.ಎಫ್. |
| ನಿ.ಪಿ.12 | ಕಲಂ 133 ರ ಅಡಿಯಲ್ಲಿ ಕೊಟ್ಟ ನೋಟೀಸ್ ನ ದೃಡೀಕೃತ ನಕಲು |
| ನಿ.ಪಿ.13 | ಉತ್ತರ ಪ್ರತಿ |
| ನಿ.ಪಿ. 14 | ಡಿಸ್ ಚಾರ್ಜ ಸಮ್ಮರಿ ಕಾರ್ಡ |
| ನಿ.ಪಿ.15 | 16 ವೈದ್ಯಕೀಯ ಬಿಲ್ಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ಗುರುತಿಸಲಾಯಿತು.(ರೂ.79,701/-) |
| ನಿ.ಪಿ.16 | ಸಾಕ್ಷಿಯ ಆಧಾರ್ ಕಾರ್ಡಿನ ಮೂಲ ಪ್ರತಿ ಪರಿಶೀಲಿಸಿದ ಬಳಿಕ ಅದು ಅವರಿಗೆ ಅವಶ್ಯಕತೆ ಇದೆ ಎಂದು ತಿಳಿಸಿದ ಕಾರಣ ಅದನ್ನು ಹಿಂದುಗಿರುಸಲಾಯಿತು ಅದರ ನೋಟರೈಜ್ ನಕಲು |

ಈ ಮೇಲೆ ಹೇಳಿದ ಎಲ್ಲಾ ಕಾರಣಗಳಿಂದ ನನ್ನ ಅರ್ಜಿಯನ್ನು ಪುರಸ್ಕರಿಸಬೇಕೆಂದು ಪ್ರಾರ್ಥನೆ.

**ಪಾಟೀ ಸವಾಲುಃ 1 ನೇ ಎದುರುದಾರರ ಪರ ವಕೀಲರು ಶ್ರೀ. ಟಿ.ಕೆ.ಆರ್. ವಕೀಲರಿಂದಃ**

1. ಮೋಟರ್ ಬೈಕ್ ನಲ್ಲಿ ಯಾರು ಯಾರು ಹೋಗುತ್ತಿದ್ದಿರಿ ಎಂದರೆ ಸಾಕ್ಷಿ ನಾನೊಬ್ಬನೇ ಹೋಗುತ್ತಿದ್ದೆ ಎಂದು ಹೇಳುತ್ತಾರೆ. ನೀವು ಹೋಗುತ್ತಿದ್ದ ಮೋಟರ್ ಸೈಕಲ್ ಯಾರಿಗೆ ಸಂಬಂಧಿಸಿದ್ದು ಎಂದರೆ ನನ್ನದೇ ಎಂದು ಹೇಳುತ್ತಾರೆ. ನಿಮ್ಮ ಡಿ.ಎಲ್. ಮತ್ತು ಆರ್.ಸಿ, ವಿಮಾ ಪಾಲಿಸಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುತ್ತೀರಾ ಎಂದರೆ ಸಾಕ್ಷಿ ಅಪಘಾತದ ವೇಳೆಯಲ್ಲಿ ಕಳೆದುಹೋಗಿವೆ ಎಂದು ಹೇಳುತ್ತಾರೆ. ಅಪಘಾತದ ಬಗ್ಗೆ ಪೋಲೀಸರಿಗೆ ದೂರನ್ನು ಯಾರು ಕೊಟ್ಟಿದ್ದಾರೆ ಎಂರೆ ಸಾಕ್ಷಿ ನನ್ನ ತಮ್ಮ ಎಂದು ಹೇಳುತ್ತಾರೆ. ನಿಮ್ಮ ತಮ್ಮ ಏನಾದರೂ ಅಪಘಾತವಾನ್ನು ಪ್ರತ್ಯಕ್ಷವಾಗಿ ನೋಡಿದ್ದಾರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನಿಮ್ಮ ತಮ್ಮ ಏನಾದರೂ ದೂರು ಕೊಡುವ ವೇಳೆಯಲ್ಲಿ ನಮ್ಮ ಬೈಕಿನ ಎಲ್ಲಾ ದಾಖಲಾತಿಗಳು ಕಳೆದುಹೋಗಿವೆ ಎಂದು ದೂರು ಕೊಟ್ಟಿದ್ದಾರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

2. ನೀವೇನಾದರೂ ನಿಮ್ಮ ಡಿ.ಎಲ್. ಮತ್ತು ಆರ್.ಸಿ ಮತ್ತು ವಿಮಾ ಪಾಲಿಸಿ ಕಳೆದು ಹೋಗಿದೆ ಎಂದು ದೂರು ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನಿಮ್ಮ ಬೈಕಿಗೆ ಯಾವುದೇ ರೀತಿಯ ದಾಖಲಾತಿಗಳು ಇಲ್ಲ ಆದ ಕಾರಣ ನೀವು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ರಸ್ತೆ ಬೆಂಗಳೂರು ಮತ್ತು ಕೋಲಾರ ರಾಷ್ಟೀಯ ಹೆದ್ದಾರಿ ಎಂದರೆ ಸರಿ. ರಾಷ್ಟೀಯ ಹೆದ್ದಾರಿಯಲ್ಲಿ ತುಂಬಾ ವಾಹನಗಳ ಸಂಚಾರ ಇರುತ್ತದೆ ಎಂದರೆ ಸರಿ. ಅಪಘಾತವಾಗುವ ಮುಂಚೆ ನಿಮಗೆ ಅಪಘಾತ ಪಡಿಸಿದ ವಾಹನವನ್ನು ನೀವು ನೋಡಿದ್ದೀರಾ ಎಂದರೆ ಸಾಕ್ಷಿ ನೋಡಿದ್ದೇನೆ ಎಂದು ಹೇಳುತ್ತಾರೆ. ನೀವು ಆ ವಾಹನವನ್ನು ಎಷ್ಟು ದೂರದಿಂದ ನೋಡಿದ್ದೀರಾ ಎಂದರೆ ಸಾಕ್ಷಿ ಸುಮಾರು 25 ರಿಂದ 30 ಅಡಿ ಅಂತರದಲ್ಲಿ

ನೋಡಿದ್ದೇನೆ ಎಂದು ಹೇಳುತ್ತಾರೆ. ಬೈಕಿನಿಂದ ನೀವೇ ಬಿದ್ದು ಅಪಘಾತವಾಗಿದೆ ಎಂದರೆ ಸರಿಯಲ್ಲ.

3. ಅಪಘಾತವಾದ ತಕ್ಷಣ ನಿಮ್ಮನ್ನು ಯಾವ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು ಎಂದರೆ ಸಾಕ್ಷಿ ಕೋಲಾರದ ಗೌರವ್ ಆಸ್ಪತ್ರೆಯಲ್ಲಿ ದಾಖಲು ಮಾಡಲಾಗಿತ್ತು ಎಂದು ಹೇಳುತ್ತಾರೆ. ನೀವು ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುವುದಿಲ್ಲ ಹಾಗೂ ನಿಮಗೆ ಯೂವುದೇ ರೀತಿಯಾದ ಶಸ್ತರ ಚಿಕಿತ್ಸೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಮಗೆ ಆದಂತಹ ಗಾಯಗಳು ಸಾದಾ ಸ್ವರೂಪದ್ದು ಎಂದರೆ ಸರಿಯಲ್ಲ. ನೀವು ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ನಂತರ ಮುಂದುವರಿದ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದೇನೆ ಹಾಗೂ ಫಿಜಿಯೋ ತೆರಪಿ ಮಾಡಿಸಿಕೊಳ್ಳುತ್ತಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೀರ ಎಂದರೆ ಸರಿಯಲ್ಲ. ವೈದ್ಯಕೀಯ ಬವೆಚ್ಚ ರೂ.1,50,000,/- ಆಗಿದೆ ಹಾಗೂ ಮುಂದುವರಿದ ವೈದ್ಯಕೀಯ ವೆಚ್ಚ ರೂ.1 ಲಕ್ಷ ಆಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ವೈದ್ಯಕೀಯ ಬಿಲ್ಲುಗಳನ್ನು ಸೃಷ್ಟಿ ಮಾಡಿಕೊಂಡು ಹಾಕಿದ್ದೀರಿ ಎಂದರೆ ಸರಿಯಲ್ಲ.

4. ನೀವು ಮೊದಲಿನ ರೀತಿಯಲ್ಲಿ ಇದ್ದೀರಿ ನಿಮಗೆ ಯಾವುದೇ ರೀತಿಯ ತೊಂದರೆ ಇಲ್ಲ ಎಂದರೆ ಸರಿಯಲ್ಲ. ನೀವು ವ್ಯವಸಾಯ ಮಾಡುತ್ತಿದ್ದುತಿಂಗಳಿಗೆ ರೂ.20,000/- ಆದಾಯ ಇತ್ತು ಎಂದು ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿದ್ದೀರಾ ಎಂರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನೀವು ವ್ಯವಸಾಯ ಮಾಡುತ್ತಿಲ್ಲ ನಿಮಗೆ ತಿಂಗಳಿಗೆ ರೂ.20,000/- ಆದಾೀಯ ಇಲ್ಲ ಎಂದರೆ ಸರಿಯಲ್ಲ. ನಿಮಗೆ ಯಾವುದೇ ರೀತಿಯ ಆರ್ಥಿಕ ನಷ್ಟವಾಗಿಲ್ಲ ಎಂದರೆ ಸರಿಯಲ್ಲ. ವಿಮಾ ಪಾಲಿಸಿ ಇಲ್ಲದಿದ್ದರೂ ಸಹ 1 ನೇ ಎದುರುದಾರರಿಗೆ ತೊಂದರೆ ಕೊಡುವಗೋಸ್ಕರ ಅವರನ್ನು ಈ

ಪ್ರಕರಣದಲ್ಲಿ ಸೇರಿಸಿದ್ದೀರಾ ಎಂದರೆ ಸರಿಯಲ್ಲ. ಪೋಲೀಸರು ಜೆ.ಸಿ.ಬಿ. ಗೆ ಪಾಲಿಸಿ ಇಲ್ಲ ಎಂದು ಹೇಳಿ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದಾರೆ ಎಂದರೆ ಸರಿ.

**2 ನೇ ಎದುರುದಾರರು ಹಾಗೂ ಅವರ ಪರ ವಕೀಲರು ಗೈರು ಹಾಜರಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ

17 ನೇ ಅಪರ ನ್ಯಾಯಾಧೀಶರು
ಮತ್ತು ಎಂಎಸಿಟಿ ಸದಸ್ಯರು